# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ನಿರ್ದೇಶಕರು, (ಗ್ರಾಮೂಸೌ-2) ಹುದ್ದೆಯ ವೇತನವನ್ನು ಬಟವಾಡೆ ಮಾಡುವ ಕುರಿತು.

**ಓದಲಾಗಿದೆ:** 1) ಸರ್ಕಾರಿ ಅಧಿಸೂಚನೆ ಸಂಖ್ಯೆ: ಗ್ರಾಅಪ 243 ಪಬವ 2014, ದಿನಾಂಕ: 19.01.2015

2) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 496 ಪಬವ 2013 ದಿನಾಂಕ: 15.02.2014

*****

**ಪ್ರಸ್ತಾವನೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಿರ್ದೇಶಕರು(ಗ್ರಾಮೂಸೌ-2) ಹುದ್ದೆಗೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ಯ ಸೇವೆಗೆ ಸೇರಿದ ವೃಂದ-ಎ(ಆಯ್ಕೆ ಶ್ರೇಣಿ)ಗೆ ಆಯ್ಕೆಯಾದ ಶ್ರೀ ಎನ್.ಕೃಷ್ಣಪ್ಪ, ಇವರನ್ನು ಮೇಲೆ(1) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ. ಈ ಹಿಂದೆ ಸದರಿ ಹುದ್ದೆಯು ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಯಿಂದ ಭರ್ತಿ ಮಾಡಲು ಎನ್‌ಕೇಡರ್ ಹುದ್ದೆಯಾಗಿದ್ದರಿಂದ, ಸದರಿ ಹುದ್ದೆಯ ವೇತನವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಐ.ಆರ್.ಎಲ್.ಎ) ಯ ವಿಭಾಗದಿಂದ ಬಟವಾಡೆ ಮಾಡಲಾಗುತ್ತಿತ್ತು. ಆದರೆ ಪ್ರಸ್ತುತ ಸದರಿ ಹುದ್ದೆಯನ್ನು ಎನ್‌ಕೇಡರ್ ಇಂದ ಹೊರತುಪಡಿಸಿರುವುದರಿಂದ, ಸದರಿ ಹುದ್ದೆಯ ವೇತನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಡ್ರಾ ಮಾಡಿ ಬಟವಾಡೆ ಮಾಡಬೇಕಾಗುತ್ತದೆ. ಸದರಿ ಹುದ್ದೆಯ ವೇತನವನ್ನು ಗ್ರಾಮೀಣ ಮೂಲಭೂತ ಸೌಲಭ್ಯ ಕೋಶದ ಲೆಕ್ಕ ಶೀರ್ಷಿಕೆ '2215-02-001-0-01' (ಯೋಜನೆ) ಯಡಿಯಲ್ಲಿ ಭರಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 90 ಪಬವ 2015, ದಿನಾಂಕ: 22.06.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು(ಗ್ರಾಮೂಸೌ-2) ಹುದ್ದೆಯ (ವೇತನ ಶ್ರೇಣಿ ರೂ. 44,250-60.600) ವೇತನವನ್ನು ದಿನಾಂಕ: 19.01.2015 ರಿಂದ ಜಾರಿಗೆ ಬರುವಂತೆ, ಇಲಾಖೆಯ ಗ್ರಾಮೀಣ ಮೂಲಭೂತ ಸೌಲಭ್ಯ ಕೋಶದಲ್ಲಿ ಸೆಳೆಯಲು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ '2215-02-001-0-01' (ಯೋಜನೆ) ರಡಿಯಲ್ಲಿ ಭರಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ವಿ.ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
4. ಜಂಟಿ ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ.
5. ನಿರ್ದೇಶಕರು (ಪಂ.ರಾಜ್ 1 ಮತ್ತು 2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್)/ಅಪರ ಕಾರ್ಯದರ್ಶಿ / ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ(ಐಆರ್.ಎಲ್.ಎ)
10. ನಗದು ಶಾಖೆ(ಸೇವೆಗಳು-ಸಿ)
11. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.